**ದಿ:03.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದ:**

ಕಾರ್ಯಪ್ಪ, ಚಂಗಪ್ಪ ಮತ್ತು ಕುಟ್ಟಪ್ಪ ಎಂಬುವವರು ಅಪ್ಪಣ್ಣರವರ ಮಕ್ಕಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಜೋಯಪ್ಪ ಮತ್ತು ಸುಬ್ಬಪ್ಪರವರೂ ಕೂಡ ಅಪ್ಪಣ್ಣರವರ ಮಕ್ಕಳು ಆಗಿರುತ್ತಾರೆ ಎಂದು ನುಡಿಯುತ್ತಾರೆ. ಕಾರ್ಯಪ್ಪ, ಚಂಗಪ್ಪ ಮತ್ತು ಕುಟ್ಟಪ್ಪ ಮೂರು ಜನ ಮಾತ್ರ ಅಪ್ಪಣ್ಣರವರ ಮಕ್ಕಳು ಎಂದರೆ ಸುಳ್ಳು. ಜೋಯಪ್ಪರವರ ತಮ್ಮನ ಹೆಸರು ಪತ್ತೆ ಹಚ್ಚಲು ನಾನು ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ಹೆಸರು ಗೊತ್ತಿಲ್ಲದ ವ್ಯಕ್ತಿಯ ಮಗನ ಹೆಸರು ಸುಬ್ಬಪ್ಪ ಆಗಿರುತ್ತದೆ. ಸುಬ್ಬಪ್ಪ ಮತ್ತು ಸುಬ್ಬಯ್ಯ ಎರಡೂ ಹೆಸರು ಒಂದೇ.

2. ಕುಟ್ಟಪ್ಪರವರಿಗೆ ಮಕ್ಕಳು ಇರುವುದಿಲ್ಲ. ಕುಟ್ಟಪ್ಪರವರಿಗೆ ಮಕ್ಕಳು ಇದ್ದರೂ ಕೂಡ ನಾನು ಉದ್ದೇಶಪೂರ್ವಕವಾಗಿ ಸದರಿಯವರಿಗೆ ಮಕ್ಕಳು ಇರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಂಗಪ್ಪರವರಿಗೆ ಕುಂಜಪ್ಪ ಮತ್ತು ಚಿನ್ನಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಕುಂಜಪ್ಪರವರ ಮಗ ಮೇದಪ್ಪ ಎಂದರೆ ಸರಿ. ಅದೇ ರೀತಿ ಮೇದಪ್ಪರವರ ಮಗನ ಹೆಸರು ಗಣಪತಿ ಎಂದರೆ ಸರಿ. ಸದರಿ ಗಣಪತಿಯವರ ಹೆಂಡತಿ ಮತ್ತು ಮಕ್ಕಳ ಹೆಸರು ಹೇಳಲು ನನಗೆ ಗೊತ್ತಿಲ್ಲ. ಗಣಪತಿ ಎಂಬುವವರು ಮೃತಪಟ್ಟ ನಂತರದಲ್ಲಿ ಅವರ ಹೆಂಡತಿಯಾದ ಮುದ್ದವ್ವ ರವರು ಅವರಿಗೆ ಸೇರಿದ ಆಸ್ತಿಯಲ್ಲಿ ಕೃಷಿ ಮಾಡುತ್ತಿದ್ದರು ಎಂದರೆ ಸರಿ. ಸದರಿ ಮುದ್ದವ್ವರವರು ಮೃತಪಟ್ಟ ನಂತರದಲ್ಲಿ ಅವರ ಮಕ್ಕಳು ಕೃಷಿ ಮಾಡುತ್ತಿದ್ದಾರೆ ಎಂದರೆ ಸುಳುಳ. ಸಾಕ್ಷಿ ಮುಂದುವರೆದು ಮುದ್ದವ್ವರವರಿಗೆ ಮಕ್ಕಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಕುಂಜಪ್ಪರವರ ತಮ್ಮನಾದ ಚಿನ್ನಪ್ಪರವರಿಗೂ ಮತ್ತು ಗಣಪತಿಯವರಿಗೂ ಮಕ್ಕಳು ಇದ್ದರೂ ಕೂಡ ಮಕ್ಕಳು ಇರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಜೋಯಪ್ಪ ಎಂಬುವವರಿಗೆ ಮುತ್ತಣ್ಣ, ಮಂದಣ್ಣ ಮತ್ತು ಮೊಣ್ಣಪ್ಪ ಎಂಬುವವರು ಮಕ್ಕಳು ಎಂದರೆ ಸರಿ. ಮುತ್ತಣ್ಣ ಮತ್ತು ಮೊಣ್ಣಪ್ಪರವರಿಗೆ ಮಕ್ಕಳು ಇರುವುದಿಲ್ಲ. ಮಂದಣ್ಣರವರಿಗೆ ಅಪ್ಪಣ್ಣ ಮಾತ್ರ ಮಗ. ನನ್ನ ತಂದೆಯಾದ ಅಪ್ಪಣ್ಣರವರಿಗೆ ನಾನು ಮತ್ತು ಇಬ್ಬರು ಹೆಣ್ಣು ಮಕ್ಕಳು. ನನ್ನ ಇಬ್ಬರೂ ಸಹೋದರಿಯವರ ಹೆಸರು ಸಾವಿತ್ರಿ ಮತ್ತು ಧಮಯಂತಿ ಆಗಿರುತ್ತದೆ. ಸದರಿಯವರು ಈಗ ಮೃತಪಟ್ಟಿರುತ್ತಾರೆ. ಸಾವಿತ್ರಿ ಎಂಬುವವರಿಗೆ ಮದುವೆಯಾಗಿದ್ದು ಅವರ ಗಂಡನ ಹೆಸರು ಅಚ್ಚಪ್ಪ ಆಗಿರುತ್ತದೆ. ಸಾವಿತ್ರಿಯವರಿಗೆ ಒಟ್ಟು ಮೂರು ಜನ ಮಕ್ಕಳು. ಸದರಿಯವರ ಹೆಸರು ಅಪ್ಪಯ್ಯ, ರಂಜಿತ್ ಮತ್ತು ರಶ್ಮಿಯಾಗಿರುತ್ತದೆ. ಸದರಿ ಅಚ್ಚಪ್ಪ, ಅಪ್ಪಯ್ಯ, ರಂಜಿತ್ ಮತ್ತು ರಶ್ಮಿ ಎಂಬುವವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ.

4. ಈ ದಾವೆಯಲ್ಲಿ ನನ್ನ ಮಗನಾದ ಕುಶಾಲಪ್ಪ ಮತ್ತು ಅಪ್ಪಣ್ಣರವರ ಬಗ್ಗೆ ವಾದ ಪತ್ರದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ನನ್ನ ಮಗಳಾದ ಲೀಲಾವತಿಯ ಬಗ್ಗೆ ವಾದಿ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಸುಬ್ಬಪ್ಪ ಅಲಿಯಾಸ್ ಸುಬ್ಬಯ್ಯರವರಿಗೆ ಇಬ್ಬರು ಮಕ್ಕಳು. ಸದರಿಯವರ ಹೆಸರು ಮಾದಪ್ಪ ಮತ್ತು ನಂಜಪ್ಪ ಆಗಿರುತ್ತದೆ. ಮಾದಪ್ಪರವರ ಮಕ್ಕಳ ಹೆಸರು ಸುಬ್ಬಯ್ಯ, ತಿಮ್ಮಯ್ಯ ಮತ್ತು ತೆಮ್ಮಯ್ಯ ಎಂದರೆ ಸರಿ. ಮಾದಪ್ಪರವರಿಗೆ ನನಗೆ ತಿಳಿದಿರುವ ಪ್ರಕಾರ ಹೆಣ್ಣು ಮಕ್ಕಳು ಇರುವುದಿಲ್ಲ. ಮಾದಪ್ಪರವರಿಗೆ ಒಬ್ಬಳು ಹೆಣ್ಣು ಮಗಳು ಇರುವ ವಿಷಯ ಗೊತ್ತಿದ್ದರೂ ಕೂಡ ನಾನು ಸದರಿ ಹೆಣ್ಣು ಮಗಳನ್ನು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸುಳ್ಳು.

5. 1ನೇ ಪ್ರತಿವಾದಿಗೆ ವಿಮಲಾ ಎಂಬ ಅಕ್ಕ ಇರುತ್ತಾರೆ ಎಂದರೆ ಸರಿ. ಸದರಿ ವಿಮಾಳರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. 4ನೇ ಪ್ರತಿವಾದಿಗೆ 4 (ಎ) ಪ್ರತಿವಾದಿ ಮಾತ್ರ ಮಗ ಆಗಿರುತ್ತಾರೆ. ನಾನು ಮೇಲೆ

ಹೇಳಿದಂತಹ ಸುಬ್ಬಯ್ಯ ಅಲಿಯಾಸ್ ಸುಬ್ಬಪ್ಪರವರ ಎರಡನೇ ಮಗನಾದ ನಂಜಪ್ಪರವರಿಗೆ ಪೂಣಚ್ಚ, ಕುಶಾಲಪ್ಪ, ಪಳಂಗಪ್ಪ, 14 ನೇ ಪ್ರತಿವಾದಿ ಮತ್ತು ಗಂಗಮ್ಮ ಮಕ್ಕಳು ಎಂದರೆ ಸರಿ. ಪೂಣಚ್ಚ, ಕುಶಾಲಪ್ಪ ಪಳಂಗಪ್ಪರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಗಂಗಮ್ಮರವರನ್ನು ಈ ದಾವೆಯಲ್ಲಿ ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ.

6. ಪೂಣಚ್ಚರವರ ಹೆಂಡತಿ ಮತ್ತು ಮಗಳು ಇದ್ದಾರೆ ಎಂದರೆ ಸರಿ. ಸದರಿಯವರ ಹೆಸರು ಪೂವವ್ವ ಮತ್ತು ಕಸ್ತೂರಿ ಆಗಿರುತ್ತದೆ. ಕುಶಾಲಪ್ಪರವರಿಗೆ ಶರೀ ಎಂಬ ಮಗಳು ಇದ್ದಾರೆ ಎಂದರೆ ಸರಿ. ಸದರಿಯವರನುನ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಾಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.